**ದಿನಾಂಕಃ 14–09–2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ವೈ.ಹೆಚ್.ಕೆ. ವಕೀಲರಿಂದಃ**

ನಮ್ಮ ಅಜ್ಜನ ಹೆಸರು ಖಂಡೆಪ್ಪ ಎಂದು ಇರುತ್ತದೆ. ಅವರ ತಂದೆಯ ಹೆಸರು ಭರಮಪ್ಪ ಮಾರ್ತಾಂಡಪ್ಪ ಬ್ಯಾಡಗಿ ಎಂದರೆ ನನಗೆ ಗೊತ್ತಿರುವುದಿಲ್ಲ. ಡ-152 ರ ಪ್ರಕಾರ ದಾವಾ ಆಸ್ತಿ ಹಾಗೂ ಇನ್ನೊಂದು ಆಸ್ತಿ 30/1 ಅ, 10 ಎಕರೆ 11 ಗುಂಟೆ 1939 ರಲ್ಲಿ ನ್ಯಾಯಾಲಯದಿಂದ ಭರಮಪ್ಪ ಮಾರ್ತಾಂಡಪ್ಪ ಬ್ಯಾಡಗಿಯವರಿಗೆ ಕಬ್ಜಾ ಕೊಡಲಾಗಿದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಈ ಆಸ್ತಿಗಳು ವಾರಸಾನಾತೆಯಿಂದ ನನ್ನ ಅಜ್ಜ ಖಂಡೆಪ್ಪನ ಹೆಸರಿಗೆ ಆಯಿತು ಎಂದರೆ ನನಗೆ ಗೊತ್ತಿರುವುದಿಲ್ಲ. ಈ ದಾವಾ ಆಸ್ತಿಯನ್ನು ಡ-142 ರ ಮೂಲಕ ಅನ್ನದಾನಗೌಡ ಶಿವಯ್ಯ ಎಂಬುವವರಿಗೆ ಖಂಡೆಪ್ಪ ಬ್ಯಾಡಗಿ ಮಾರಾಟ ಮಾಡಿದರು ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯನ್ನು ಡ-783 ರ ಅನ್ವಯ 1967 ರ ಸಾಲಿನಲ್ಲಿ ಮರಡೆಪ್ಪ ಹಾಲಪ್ಪ ಕರ್ವಜ್ಜನವರಿಗೆ ಶಿವಯ್ಯರವರ ವಾರಸುದಾರರು ಮಾರಿದರು ಎಂದರೆ ನಿಜ. ಡ-841 ರ ಅನ್ವಯ 1972 ರಲ್ಲಿ ಕರಿಯಪ್ಪಜ್ಜ ತನ್ನ ಹೆಂಡತಿಯ ಹೆಸರಿನಲ್ಲಿ ಆಸ್ತಿಯನ್ನು ಖರೀದಿ ಹಿಡಿದರು ಎಂದರೆ ಸರಿಯಲ್ಲ. ಆ ನಾತೆಯಿಂದ ನಾವು ಮತ್ತು ಉಳಿದ ಪ್ರತಿವಾದಿಗಳು ಜಂಟಿ ಸ್ವಾಧೀನ ಮತ್ತು ಅನುಭವ ಹೊಂದಿರುತ್ತೇವೆ ಎಂದರೆ ಸರಿಯಲ್ಲ. ಸರ್ವೆ ನಂ. 30/2 ಅ 02 ಎಕರೆ 12 ಗುಂಟೆ ಇದು ನಮ್ಮ ತಂದೆಯ ಹೆಸರಿಗೆ ಉತಾರ ಚಾಲ್ತಿಯಲ್ಲಿದೆ ಎಂದರೆ ನಿಜ. ಈ ಆಸ್ತಿಯು ಹಿಸ್ಸೆ ಮಾಡಿಕೊಂಡಿರುತ್ತೇವೆ ಆದರೆ ಖಾತೆ ಬದಲಾವಣೆ ಮಾಡಿಕೊಂಡಿರುವುದಿಲ್ಲ. ಇನ್ನೊಂದು ಆಸ್ತಿ 310/3 ಕ 03 ಎಕರೆ 09 ಗುಂಟೆ ನಮ್ಮ ಅಜ್ಜಿ ಹಾಲಮ್ಮ ಮತ್ತು ಚೆಕ್ಕಮ್ಮನವರ ವಾರಸುದಾರರಾದ ಕಾಮವ್ವ ರತ್ನವ್ವ ದಿಳ್ಳೆಪ್ಪನವರ ಹೆಸರಿಗೆ ಜಂಟಿಯಾಗಿದೆ ಎಂದರೆ ನಿಜ. ಈ ಆಸ್ತಿಯನ್ನು ಕರಿಯಪ್ಪ ಮಗಳು ಹನುಮವ್ವಗೆ

ವಿಲ್ ಮುಖಾಂತರ ವರ್ಗಾವಣೆ ಮಾಡಿದರು ಎಂದರೆ ಸಾಕ್ಷಿಯು ಮಗಳು ಮತ್ತು ಹೆಂಡತಿ ಹಾಲವ್ವಗೆ ಜಂಟಿಯಾಗಿ ಮಾಡಿದರು ಎಂದು ಹೇಳುತ್ತಾರೆ. ಈ ಆಸ್ತಿಯು ಹನುಮವ್ವ ತೀರಿಕೊಂಡ ನಂತರ ಪ್ರತಿವಾದಿ ಸಂಖ್ಯೆ 2, 7 ಮತ್ತು 8 ರವರ ಹೆಸರಿಗೆ ಆಗಿದೆ ಎಂದರೆ ನಿಜ. ಈಗ ಈ ಆಸ್ತಿಯನ್ನು 2 ನೇ ಪ್ರತಿವಾದಿ ಉಳುಮೆ ಮಾಡುತ್ತಾರೆ ಎಂದರೆ ಸರಿಯಲ್ಲ. ಆದರೆ ಈ ಆಸ್ತಿಯನ್ನು ಕಂದಾಯ ಅಧಿಕಾರಿಗಳು ಹನುಮವ್ವ ಮತ್ತು ಹಾಲವ್ವನ ಹೆಸರಿಗೆ ಜಂಟಿಯಾಗಿ ತಪ್ಪು ಮಾಹಿತಿಯಿಂದ ಖಾತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕದರಮಂಡಲಗಿ ಗ್ರಾಮದ ಸರ್ವೆ ನಂ. 226/2 39 ಗುಂಟೆ ಒಟ್ಟು ಕುಟುಂಬದ ಆದಾಯದಿಂದ ನನ್ನ ಹೆಸರಿಗೆ ಖರೀದಿ ಮಾಡಲಾಗಿದೆ ಎಂದರೆ ಸರಿಯಲ್ಲ. ಈ ಆಸ್ತಿಯಲ್ಲೂ ಸಹ ನಮ್ಮ ಕುಟುಂಬದ ಎಲ್ಲಾ ಸದಸ್ಯರು ಜಂಟಿಯಾಗಿದೆ ಎಂದರೆ ಸರಿಯಲ್ಲ.

ಕದರಮಂಡಲಗಿ ಗ್ರಾಮದ ವಿ.ಪಿ.ಸಿ ನಂ. 405 ಮತ್ತು 406 ನಮ್ಮ ಕುಟುಂಬದ ಆಸ್ತಿಗಳು ನಮ್ಮ ತಂದೆಯವರ ಹೆಸರಿಗೆ ಇದ್ದು ಅವರು ತೀರಿಕೊಂಡ ನಮ್ಮ ಹೆಸರಿಗೆ ವಾರಸುನಾತೆ ಬದಲಾವಣೆ ಆಗಿದೆ ಎಂದರೆ ಸರಿಯಲ್ಲ. ವಿ.ಪಿ.ಸಿ ಸಂಖ್ಯೆ 405 ನಮ್ಮ ತಂದೆ ವಿ.ಕೆ. ಸಾಹುಕಾರ ರಾಣೇಬೆನ್ನೂರವರಿಂದ ಖರೀದಿ ಮಾಡಿರುತ್ತಾರೆ. ವಿ.ಪಿ.ಸಿ ಸಂಖ್ಯೆ 406 ನಮ್ಮ ಅಣ್ಣನ ಹೆಸರಿಗೆ ವಿ.ಕೆ. ಸಾಹುಕಾರ ರಾಣೇಬೆನ್ನೂರವರಿಂದ ಖರೀದಿ ಮಾಡಿರುತ್ತಾರೆ. ನಮ್ಮ ಕುಟುಂಬದಲ್ಲಿ ಇಲ್ಲಿಯವರೆಗೂ ಯಾವುದೇ ಹಿಸ್ಸೆ ದಿಸ್ಸೆ ಆಗಿರುವುದಿಲ್ಲ ಎಂದರೆ ವಾರಸಾ ಆಗಿರುತ್ತದೆ. ತಂದೆ ಆಸ್ತಿಯಲ್ಲಿ ಪಾಲು ವಿಭಾಗ ಆಗಿರುವುದಿಲ್ಲ. ಸಾಕ್ಷಿ ಮುಂದುವರೆದು ಪಾಲು ವಿಭಾಗ ಆಗಿರುವುದಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂ. 310/2 ಅ, 310/2 ಬ, 310/3 ಕ, 226/2, ವಿಪಿಸಿ ಆಸ್ತಿ ನಂ. 405 ಮತ್ತು 406, ಸರ್ವೆ ನಂ. 30/3 ಅ, 30/3 ಬ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ನಮ್ಮ ಪಿತ್ರಾರ್ಜಿತ ಆಸ್ತಿ ಸರ್ವೆ ನಂ. 30/2 ಅ ಮಾತ್ರ ಇರುತ್ತದೆ ಈ ಎಲ್ಲಾ ಆಸ್ತಿಗಳೂ ಪಿತ್ರಾರ್ಜಿತ ಆಸ್ತಿಗಳಿದ್ದರೂ

ಖೊಟ್ಟಿ ವಿಲ್ ಮುಖಾಂತರ ಆಸ್ತಿ ನನ್ನಹೆಸರಿಗೆ ಮಾಡಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಹಾಲಮ್ಮ ತೀರಿಕೊಂಡಾಗ ಸುಮಾರು 100 ವರ್ಷ ವಯಾಸ್ಸಾಗಿತ್ತು ಎಂದರೆ ಸರಿಯಲ್ಲ. 75 ವರ್ಷ ವಯಸ್ಸಾಗಿತ್ತು. ಅವರು ತೀರಿಕೊಳ್ಳುವ ಸಮಯದಲ್ಲಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದರು ಎಂದರೆ ಸರಿಯಲ್ಲ. ಹಾಲಮ್ಮ ದಿನಾಂಕಃ 13.01.2011 ರಂದು ದಾವಾ ಆಸ್ತಿ ಮತ್ತು ವಿ.ಪಿ.ಸಿ. 310 ರ ಮೇಲೆ ಈ ಹಿಂದೆ ಮಾಡಿದ ವಿಲ್ಲನ್ನು ರದ್ದು ಮಾಡಿದರು ಎಂದರೆ ಸಾಕ್ಷಿಯುೂ ಖಂಡೆಪ್ಪ ಹಾಲವ್ವಗೆ ಪೆನ್ಸನ್ ಮಾಡಿಸಬೇಕು ಎಂದು ಸುಳ್ಳು ಮಾಹಿತಿ ಕೊಟ್ಟು ವಿಲ್ಲನ್ನು ಮಾಡಿಸಿದ್ದರು ಎಂದು ಹೇಳುತ್ತಾರೆ. ಸದರಿ ವಿಲ್ 13.11.2011 ರಂದು ರದ್ದಾಗಿರುವುದು ನೊಂದಣಿ ಆಗಿದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ-4 ರ ಪತ್ರದಲ್ಲಿ ಪೆನ್ಸನ್ ಹಣ ಮಾಡಿಸಲು ಕರೆತಂದಿದ್ದರು ಎಂದು ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-4 ರಲ್ಲಿ ನನ್ನ ಗಮನಕ್ಕೆ ಬಾರದಹಾಗೇ ವಿಲ್ ಮಾಡಿಸಿರುತ್ತಾರೆ ಹೀಗಾಗಿ ರದ್ದು ಮಾಡುತ್ತಿದ್ದೇನೆ ಎಂದು ಬರೆಸಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕಃ 02.10.2017 ರಂದು ನಮ್ಮ ಅಜ್ಜಿ ಹಾಲವ್ವ ಮೃತಪಟ್ಟಿರುತ್ತಾರೆ. 2 ನೇ ವಿಲ್ ಆಗಿರುವುದು ಗಮನಕ್ಕೆ ಬಂದ ನಂತರ ಖಾತೆ ಬದಲಾವಣೆಗೆ ಅರ್ಜಿ ಕೊಟ್ಟಿರುವುದಿಲ್ಲ. ಮೊದಲನೇ ವಿಲ್ ನಲ್ಲಿ ಕಂದಾಯ ಅಧಿಕಾರಗಳು ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದ ಮೇರೆಗೆ ನಾವು ನ್ಯಾಯಾಲಯಕ್ಕೆ ವ್ಯಾಜ್ಯ ಮಾಡಿದೆವು. 2 ನೇ ವಿಲ್ ಆಗಿರುವುದನ್ನು ಬೀರಪ್ಪ ಕಾಡಮ್ಮನವರು ನಮ್ಮ ಅಜ್ಜಿ ವಿಲ್ ಮಾಡಿರುತ್ತಾರೆ ಎಂಬ ವಿಷಯ ನನಗೆ ಹೇಳಿರುತ್ತಾರೆ. ಈ ವಿಷಯವನ್ನು 2018 ರಲ್ಲಿ ಹೇಳಿರುತ್ತಾರೆ, ದಿನಾಂಕ, ತಿಂಗಳು ನೆನಪಿರುವುದಿಲ್ಲ. ಮನೆಯಲ್ಲಿ ಟ್ರಂಕಿನಲ್ಲಿ ವಿಲ್ ಇತ್ತು. ಟ್ರಂಕಿನಲ್ಲಿ ಒಂದು ವಿಲ್ ಮಾತ್ರ ಇತ್ತು ಅದರೊಂದಿಗೆ ಆಸ್ತಿಗಳ ಹಳೆಯ ಉತಾರುಗಳು ಇದ್ದವು. ಬೀರಪ್ಪ ಕಾಡಮ್ಮನವರು ರಾಮಗೊಂಡನಹಳ್ಳಿಯವರಿದ್ದು

ಅವರು ಹಾಲಮ್ಮಗೆ ಪರಿಚಯ ಇದ್ದರು. ಅವರು ನನಗೆ ಪರಿಚಯ ಇರುವುದಿಲ್ಲ. ಅವರು ನಮ್ಮ ಮನೆಗೆ ಬಂದು ಹಾಲಮ್ಮಗೆ ಮಾತನಾಡಿಸುತ್ತಾ ಇದ್ದರು. ಹಾಲಮ್ಮನವರು ಸಹ ಅವರು ಮನೆಗೆ ಹೋಗುತ್ತಿದ್ದರು. ಬೀರಪ್ಪರವರು ವ್ಯವಸಾಯ, ವಾಹನವನ್ನು ಓಡಿಸುತ್ತಾರೆ. ಹಾಲಮ್ಮನವರು ಮೊದಲನೇ ಮೋಸದಿಂದ ರದ್ದು ಮಾಡಿರುತ್ತಾರೆ, ಮತ್ತೊಂದು ವಿಲ್ಲನ್ನು ಮಾಡಿರುತ್ತೇನೆ ಎಂದು ಹೇಳಿರುತ್ತಾರೆ. 2 ನೇ ವಿಲ್ ಮಾಡುವಾಗ ಅವರೊಂದಿಗೆ ಗೋಣೆಪ್ಪ, ಹಿತಾಯತ್ ಕಿಲ್ಲೇದಾರ ಮತ್ತು ಕರಿಯಪ್ಪ ಪ್ಯಾಟಿಮನಿ ಇದ್ದರು ಎಂದು ತಿಳಿಸಿರತ್ತಾರೆ. ಗೋಣೆಪ್ಪ ಬ್ಯಾಡಗಿಯವರು ಇರುತ್ತಾರೆ. ಕರಿಯಪ್ಪ, ಹಿದಾಯತುಲ್ಲಾ ಕದರಮಂಡಲಗಿಯವರು ಇರುತ್ತಾರೆ. ನನ್ನ ಅಜ್ಜಿ ಹಾಲಮ್ಮ ನನ್ನ ಮೊಮ್ಮಗ ನನಗೆ ಜೋಪಾನ ಮಾಡಿರುತ್ತಾರೆ ಅವನಿಗೆ ಅನ್ಯಾಯ ಆಗಬಾರದು ಹೀಗಾಗಿ ನಾನು ವಿಲ್ ಮಾಡಿರುತ್ತೇನೆ. ಈ ವಿಷಯವನ್ನು ನಾನು ಸಾಯುವವರೆಗೂ ಹೇಳಬೇಡಿ ಎಂದು ಬೀರಪ್ಪ ಕಾಡಮ್ಮನವರ ಮುಂದೆ ಹೇಳಿರುತ್ತಾರೆ. ನನ್ನ ಅಜ್ಜಿ ತೀರಿಕೊಂಡಾಗ ಈ ನಾಲ್ಕು ಜನ ಅಂತ್ಯಸಂಸ್ಕಾರಕ್ಕೆ ಬಂದಿದ್ದರು. ಸುಮಾರು 15 ದಿವಸದ ನಂತರ ನನಗೆ ಬೀರಪ್ಪ ಕಾಡಮ್ಮನವರು ಸಿಕ್ಕಿದ್ದರು. ನಂತರ 4-5 ತಿಂಗಳ ನಂತರ ಅವರು ನನಗೆ ಸಿಕ್ಕಿರುತ್ತಾರೆ. ಈ ಎರಡೂ ಬಾರಿಯೂ ಬ್ಯಾಡಗಿಯಲ್ಲಿ ಸಿಕ್ಕಿದ್ದರು. 2 ನೇ ಬಾರಿ ಸಿಕ್ಕಾಗ ನಮ್ಮ ಅಜ್ಜಿ ವಿಲ್ ಮಾಡಿರುವ ವಿಷಯ ಹೇಳಿದ್ದರು. ಮೊದಲನೇ ಬಾರಿ ಅಜ್ಜಿ ತೀರಿಕೊಂಡ ವಿಷಯ ಮಾತ್ರ ಮಾತನಾಡಿದ್ದರು. ಕರಿಯಪ್ಪ ಮತ್ತು ಹಿದಾಯತುಲ್ಲಾ ನಮ್ಮ ಮನೆಯ ಒಂದು ಓಣಿಯ ಹತ್ತಿರ ಇದೆ ಎಂದರೆ ಸರಿಯಲ್ಲ. ಗ್ರಾಮದಲ್ಲಿ ನಮಗೆ ಅವರು ಸಿಗುತ್ತಿರುತ್ತಾರೆ ಎಂದರೆ ನಿಜ. ಇವರು ವಿಲ್ ಮಾಡಿರುವ ವಿಚಾರ ನಮ್ಮ ಅಜ್ಜಿ ತೀರಿಕೊಂಡ ನಂತರ ಹೇಳಿರುವುದಿಲ್ಲ. ಈಗ ಅವರು ವಿಲ್ ಮಾಡಿರುವ ವಿಚಾರ ಹೇಳಿರುತ್ತಾರೆ. ಖಾತೆ ಬದಲಾವಣೆಗೆ ತಕಾರಾರು ಆದಾಗ ಈ ವಿಷಯ ಹೇಳಿರುತ್ತಾರೆ. ಈ ವಿಷಯವನ್ನು ನಮ್ಮ ಗ್ರಾಮದಲ್ಲಿ ಹೇಳಿರುತ್ತಾರೆ. ಹಾಲಮ್ಮ ಯಾವುದೇ ವಿಲ್ಲನ್ನು ಮಾಡಿರುವುದಿಲ್ಲ, ಸಾಕ್ಷಿದಾರರು ಯಾವುದೇ ಸಾಕ್ಷಿ

ಮಾಡಿರುವುದಿಲ್ಲ, ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಲಮ್ಮನ ಆಸಿತ ಎತ್ತಿ ಹಾಕಬೇಕು ಎಂಬ ಉದ್ದೇಶದಿಂದ ಎಂದು ಖೊಟ್ಟಿ ದಾಖಲೆ ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ವಿಲ್ಲಗೆ ಸಹಿ ಮಾಡಿರುವುದಿಲ್ಲ, ಹೆಬ್ಬೆಟ್ಟು ಗುರುತು ಹಾಲಮ್ಮನದ್ದು ಅಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಸಾಕ್ಷಿದಾರರು ಸೇರಿ ನಿಪಿ-4 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಇನ್ನೊಂದು ಆಸ್ತಿ ಸರ್ವೆ ನಂ. 310/3 ಕ ಆಸ್ತಿಯ ಮೇಲೆ ನನ್ನಅಣ್ಣ ಹಾಲಮ್ಮ ವಿಲ್ ಮಾಡಿರುತ್ತಾರೆ ಎಂದು ಸಿವಿಲ್ ನ್ಯಾಯಾಲಯದಲ್ಲಿ ವ್ಯಾಜ್ಯ ಮಾಡಿರುತ್ತಾರೆ ಎಂದರೆ ಇರಬಹುದು. ಆ ವಿಲ್ ಮೇಲೆ ಖಾತೆ ಬದಲಾವಣೆಗೆ ನನ್ನ ಅಣ್ಣ ಅರ್ಜಿ ಸಲ್ಲಿಸಿದ್ದರು ಎಂದರೆ ಇರಬಹುದು. ಅದನ್ನು ಹಿಂಪಡೆದರು ಎಂದರೆ ಸರಿಯಲ್ಲ. ಖಾತೆಗೆ ಅರ್ಜಿ ಕೊಡುವುದು, ಹಿಂಪಡೆಯುದು, ಮತ್ತು ಈ ಎರಡೂ ವ್ಯಾಜ್ಯ ಮಾಡಿರುವುದು ನಾವು ಇಬ್ಬರು ಶಾಮೀಲಾಗಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಹಾಲಮ್ಮ ತೀರಿಕೊಳ್ಳುವ 2 ವರ್ಷದ ಹಿಂದೆ ಬುದ್ಧಿಭ್ರಮಣೆ ಆಗಿತ್ತು, ಅವರು ಹಾಸಿಗೆ ಹಿಡಿದು ಪರಿಜ್ಞಾನ ಇಲ್ಲದ ಹಾಗೇ ಇದ್ದರು, ಅವರಿಗೆ ವಿಲ್ ಮಾಡುವ ಶಕ್ತಿ ಇರಲಿಲ್ಲ ಎಂದರೆ ಸರಿಯಲ್ಲ. ಹಾಲಮ್ಮಗೆ ವಿಲ್ ಮಾಡುವ ಮನೋಭಾಗ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯೂ ಒಟ್ಟು ಕುಟುಂಬದ ಆಸ್ತಿಯಾದ್ದರಿಂದ ಹಾಲಮ್ಮಗೆ ವಿಲ್ ಮಾಡುವ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-10 2009 ರ ಮೊದಲು ಮಾಡಿಸಿದ್ದು ಎಂದರೆ ನಿಜ. ಈಗ ಅದು ಚಾಲ್ತಿಯಲ್ಲಿ ಇರುವುದಿಲ್ಲ ಎಂದರೆ ಎ.ಪಿ.ಎಲ್., ಬಿ.ಪಿ.ಎಲ್ ಕಾರ್ಡ ಬಂದ ನಂತರ ರದ್ದಾಗಿರುತ್ತದೆ. ಯಾವಾಗ ರದ್ದಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಎಲ್ಲರಿಗೂ ಹಕ್ಕು ಇದೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 6 ರಿಂದ 10 ನೇ ಪ್ರತಿವಾದಿ ಪರಃ</u>**

ಕೋರಿಕೆ ಮೇರೆಗೆ ಮುಂದೂಡಲಾಗಿದೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).**

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.